ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾ ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಹಾಸನ ವೃತ್ತ, ಹಾಸನ

ಅಧಿಸೂಚನೆ ಸಂಖ್ಯೆ: ಎ3/ಸಿಬ್ಬಂದಿ/ಅವೀ/ನೇನೆ/ವಿವ-25/2023-24

ದಿನಾಂಕ:19-09-2023 ರಂತೆ

2023-24 ನೇ ಸಾಲಿನಲ್ಲಿ 20 ಅರಣ್ಯ ವೀಕ್ಷಕ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನೇರ ನೇಮಕಾತಿ

# ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ:06.08.2019 ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019 ರನ್ವಯ ಅರಣ್ಯ ವೀಕ್ಷಕ ವೃಂದಕ್ಕೆ ಸಂಬಂಧಿಸಿದಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಆಯ್ಕೆ ಪ್ರಾಧಿಕಾರವಾಗಿರುತ್ತಾರೆ.

ದಿನಾಂಕ:14-02-2024 ರಂದು ಪ್ರಕಟಿಸಲಾದ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ವಿಲೇ ಮಾಡಿ, ಅರ್ಹ ಅಭ್ಯರ್ಥಿಗಳ 1:20 ಅಂತಿಮ ಆಯ್ಕೆ ಪಟ್ಟಿಯನ್ನು ಅನುಬಂಧ-2 ರ ದಿನಾಂಕ:22-02-2024 ರಂದು ಪ್ರಕಟಣೆಯನ್ನು ಪ್ರಕಟಿಸಲಾಗಿರುತ್ತದೆ. ಸದರಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ **ದಿನಾಂಕ:29-02-2024 ರಿಂದ 04-03-2024 ರವರೆಗೆ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ಧಾರ್ಢ್ಯತೆ ಪರೀಕ್ಷೆ [Physical Standard Test]** ಹಾಗೂ ಮೂಲ ದಾಖಲಾತಿ ಪರಿಶೀಲನೆಯನ್ನು **ಪೊಲೀಸ್ ಕ್ರೀಡಾಂಗಣ, DAR, ಪೆನಷೆನ್ ಮೊಹಲ್ಲಾ, ಹಾಸನ** ಇಲ್ಲಿ ನಡೆಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳು **ದಿನಾಂಕ:29-09-2024 ರಂದು ಬೆಳಿಗ್ಗೆ 7.00 ಗಂಟೆಗೆ** ಸರಿಯಾಗಿ ಈ ಕೆಳಕಂಡ ದಾಖಲಾತಿಗಳೊಂದಿಗೆ ಹಾಜರಾಗುವುದು.

1. ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ಮೂಲ ದಾಖಲಾತಿಗಳು
2. ಮೂಲ ದಾಖಲಾತಿಗಳ ಸ್ವಯಂ ದೃಢೀಕೃತ 3 ಪ್ರತಿಗಳು
3. ಅಭ್ಯರ್ಥಿಯ ಇತ್ತೀಚಿನ Pass Port ಅಳತೆಯ 5 ಭಾವಚಿತ್ರಗಳೊಂದಿಗೆ ಹಾಜರಾಗುವುದು
4. ಅಧಿಸೂಚನೆಯಲ್ಲಿ ನಮೂದಿಸಿದ ಯಾವುದಾದರೂ ಒಂದು ಗುರುತಿನ ಚೀಟಿಯ ಮೂಲ ಪ್ರತಿ ಹಾಗೂ 2 ಸ್ವಯಂ ದೃಢೀಕೃತ ಪ್ರತಿಯನ್ನು ಸಲ್ಲಿಸುವುದು.
5. ಸಾಮಾನ್ಯ ಅಂಗ ವಿಕಲ ಅಭ್ಯರ್ಥಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆ ಸಂದರ್ಭದಲ್ಲಿ ಅಭ್ಯರ್ಥಿಗಳ ಅಂಗವಿಕಲತೆಯನ್ನು ದೃಢೀಕರಿಸಲು ಆಧಾರವಾಗಿರುವ ಎಲ್ಲಾ ಸಂಬಂಧಿಸಿದ ವೈದ್ಯಕೀಯ ದಾಖಲಾತಿಗಳನ್ನು ಹಾಜರುಪಡಿಸುವುದು.
6. ಸ್ಥಳೀಯ ಅರಣ್ಯ ಬುಡಕಟ್ಟು ಪರಿಶಿಷ್ಟ ಪಂಗಡ (Local Forest Dwelling Tribes) ಪ್ರವರ್ಗದಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಅಧಿಸೂಚನೆಯಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ದೃಢೀಕರಿಸಿ ಪಡೆದ ವಾಸಸ್ಥಳ ಪ್ರಮಾಣ ಪತ್ರವನ್ನು ಇನ್ನಿತರೆ ಮೂಲ ದಾಖಲಾತಿಗಳೊಂದಿಗೆ ಹಾಜರುಪಡಿಸತಕ್ಕದ್ದು.
7. ಮೇಲ್ಕಂಡ ಪ್ರಕ್ರಿಯೆಯು ಒಂದು ದಿನಕ್ಕಿಂತ ಹೆಚ್ಚಿನ ದಿನ ನಡೆಯುವ ಸಂಭವವಿರುವುದರಿಂದ ತಂಗುವಿಕೆಗೆ ಎಲ್ಲಾ ಪೂರ್ವ ಸಿದ್ಧತೆಗಳೊಂದಿಗೆ ಹಾಜರಾಗಲು ತಿಳಿಸಿದೆ. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಪ್ರಯಾಣ ಭತ್ಯೆ ಇನ್ನಿತರ ಭತ್ಯೆಗಳನ್ನು ಇಲಾಖೆಯಿಂದ ನೀಡಲಾಗುವುದಿಲ್ಲ.
8. ಹಾಜರಾಗಲು ನಿಗಧಿಪಡಿಸಿದ ದಿನಾಂಕದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದಿಲ್ಲ. ಮೇಲ್ಕಂಡ ದಿನಾಂಕದಂದು ನೀವು ಹಾಜರಾಗದೇ ಇದ್ದ ಪಕ್ಷದಲ್ಲಿ ಅರಣ್ಯ ವೀಕ್ಷಕ ಹುದ್ದೆಗೆ ಸೇರಲು ನಿಮಗೆ ಇಚ್ಛೆ ಇಲ್ಲವೆಂದು ಭಾವಿಸಿ ನಿಮ್ಮ ಹೆಸರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.
9. ದೈಹಿಕ ತಾಳ್ವಿಕ ಮತ್ತು ದೈಹಿಕ ಸಮರ್ಥತೆ ಪರೀಕ್ಷೆಗಳಲ್ಲಿ ಯಾವುದೇ ಅವಗಡ ಸಂಭವಿಸಿದಲ್ಲಿ ಇಲಾಖೆಯು ಹೊಣೆಗಾರರಾಗುವುದಿಲ್ಲ.
10. ಅಭ್ಯರ್ಥಿಯು ಗರ್ಭಿಣಿಯರಾಗಿದ್ದಲ್ಲಿ ದೈಹಿಕ ತಾಳ್ವಿಕೆ ದೈಹಿಕ ಸಮರ್ಥತೆ ಪರೀಕ್ಷೆಗೆ ಭಾಗವಹಿಸುವ ಕುರಿತು ವಿನಾಯಿತಿ ನೀಡುವಂತೆ ಕೋರಿ ವೈದ್ಯಕೀಯ ದೃಢೀಕರಣ ಪತ್ರದೊಂದಿಗೆ ಮನವಿ ಪತ್ರವನ್ನು ಈ ಪರೀಕ್ಷೆಗಳು ನಡೆಯುವ ಪರೀಕ್ಷಾ ಕೇಂದ್ರದ ಆಯ್ಕೆ ಪ್ರಾಧಿಕಾರದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನೀಡಿದಲ್ಲಿ ವಿನಾಯಿತಿ ನೀಡಲಾಗುವುದು

26.2.2024

(ಆರ್.ರವಿಶಂಕರ್, ಭಾ.ಅ.ಸೇ)

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಹಾಗೂ ಆಯ್ಕೆ ಪ್ರಾಧಿಕಾರ,

ಹಾಸನ ವೃತ್ತ, ಹಾಸನ.